ಮೂಲ ದಾವಾ ಸಂಖ್ಯೆ. 70/2015 ಡಿ ಡಬ್ಲ್ಯೂ 1

(ದಿನಾಂಕ 25-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಮುಂದುವರೆದ ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀ ಡಿ ಎಂ ವಕೀಲರಿಂದಃ-

ನಾನು ನೊಂದಾಯಿತವಲ್ಲದ ದಾನಪತ್ರವನ್ನು ಹಾಜರುಪಡಿಸಿದ್ದು ಇರುತ್ತದೆ. ಸದರಿ ದಾಖಲೆಯನುನ ಪರಿಶೀಲಿಸಿ ನೊಡಲಾಗಿ ಸದರಿ ದಾಖಲೆ ಮೇಲೆ ಪ್ರತಿವಾದಿಯರು ಮುದ್ರಾಂಕ ಶುಲ್ಕ ರೂ.3257/- ಗಳನ್ನು ಪಾವತಿಸಿದ್ದು ಇರುತ್ತದೆ. ಆ ಬಗ್ಗೆ ಜಿಲ್ಲಾ ನೊಂದಣಾಧಿಕಾರಿಗಳು ವಿಜಯನಗರ ಇವರು ಕಲಂ.41 ಸ್ಟಾಂಪ್ ಕಾಯ್ದೆಯಡಿಯಲ್ಲಿ ಪ್ರಮಾಣಪತ್ರ ಸಹಾ ದಿಃ29-11-2025 ರಂದು ನೀಡಿರುತ್ತಾರೆ. ಸದರಿ ದಾಖಲೆಯನ್ನು ನಿಡಿ-13 ಎಂದು ಗುರುತಿಸಲಾಯಿತು. ಸದರಿ ದಾಖಲೆಯನ್ನು ನನ್ನ ಅಣ್ಣ ಪರಶುರಾಮ್ ಇವರು ಬರೆದುಕೊಟ್ಟಿರುತ್ತಾರೆ. ಸದರಿ ದಾಖಲೆಗೆ ನನ್ನ ಅಣ್ಣ ಪರಶುರಾಮ್ ಇವರು ಸಹಿ ಮಾಡಿರುತ್ತಾರೆ ಸಾಕ್ಷಿಯು ಸದರಿ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಡಿ-13 ಎ ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ಶಿವರಾಯಪ್ಪ ಮತ್ತು ಸಿದ್ದಪ್ಪ ಎನ್ನುವವರು ಸಹಿ ಮಾಡಿದ್ದು ಇರುತ್ತದೆ. ಸಾಕ್ಷಿಯು ಸಾಕ್ಷಿದಾರರ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ-13 ಬಿ ಮತ್ತು ನಿಡಿ-13 ಸಿ ಎಂದು ಗುರುತಿಸಲಾಯಿತು. ಸದರಿ ದಾಖಲೆಯನ್ನು ಬಿ.ಶರಣಪ್ಪ ಇವರು ಬಿಕ್ಕಲಂ ಅಂತಾ ಸಹಿ ಮಾಡಿರುತ್ತಾರೆ. ಸಾಕ್ಷಿಯು ಅವರ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಡಿ-13 ಡಿ ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಮುಖ್ಯವಿಚಾರಣೆಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ